62

**ಮೆ: ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಇವರು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು, ಸಂಕೋನಟ್ಟಿ ಗ್ರಾಮದ ಸರ್ವೆ ನಂ. 1141, 1142, 1143, 1136, 1137, 225 ಮತ್ತು 226ರಲ್ಲಿ, ಸ್ಥಾಪಿತಗೊಂಡಿರುವ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4,000 ಟಿಸಿಡಿ ಯಿಂದ 5,500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 12 ಮೆ.ವ್ಯಾ/ಪ್ರತಿಗಂಟೆಗೆ ನಿಂದ 27 ಮೆ.ವ್ಯಾ/ಪ್ರತಿಗಂಟೆಗೆ ಹೆಚ್ಚಿಸಲು ಕುರಿತು ಕರೆಯಲಾದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು**

ದಿನಾಂಕ : **28/10/2016**

ಸಮಯ : **11.00 ಗಂಟೆ ಬೆಳಿಗ್ಗೆ**

ಸ್ಥಳ : **ಯೋಜನೆಯ ಸ್ಥಳದಲ್ಲಿ**

- **ಮೆ: ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ,** ಈ ಸಂಸ್ಥೆಯು ತನ್ನ ಸಮುದಾಯಿ ಕಛೇರಿಯನ್ನು ಸಂಕೋನಟ್ಟಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ, ಕರ್ನಾಟಕ ರಾಜ್ಯ ಸ್ಥಳದಲ್ಲಿ ಹೊಂದಿದ್ದು ಹಾಗೂ ಇದು ಈ ಕೆಳಗಿನ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
- ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಸಂಕೋನಟ್ಟಿ ಗ್ರಾಮದಲ್ಲಿ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4,000 ಟಿಸಿಡಿ ಯಿಂದ 5,500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 12 ಮೆ.ವ್ಯಾ/ಪ್ರತಿಗಂಟೆಗೆ ನಿಂದ 27 ಮೆ.ವ್ಯಾ/ಪ್ರತಿಗಂಟೆಗೆ ಹೆಚ್ಚಿಸುವದು.

**<u>ಯೋಜನೆ ಸ್ಥಳದ ವಿವರಗಳು:-</u>**

- ಈ ಯೋಜನೆಯನ್ನು ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಸರ್ವೆ ನಂ. 1141, 1142, 1143, 1136, 1137, 225 ಮತ್ತು 226, ಸಂಕೋನಟ್ಟಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರಖಾನೆಯ ಕಬ್ಬು ನುರಿಸುವ ಉತ್ಪಾದನಾ ಸಾಮರ್ಥ್ಯವನ್ನು 4,000 ಟಿಸಿಡಿ ಯಿಂದ 5,500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 12 ಮೆ.ವ್ಯಾ/ಪ್ರತಿಗಂಟೆಗೆ ನಿಂದ 27 ಮೆ.ವ್ಯಾ/ಪ್ರತಿ ಗಂಟೆಗೆ ಹೆಚ್ಚಿಸುವದು.

**-: ಸಭೆಗೆ ಹಾಜರಿದ್ದ ಅಧಿಕಾರಿಗಳು :-**

ಸದರ ಸಾರ್ವಜನಿಕ ವಿಚಾರಣಾ ಸಭೆಯನ್ನು ಪರಿಸರ ಸಂರಕ್ಷಣ ಹಾಗು ಅರಣ್ಯ ಸಚಿವಾಲಯ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14-09-2016 ರ ತಿದ್ದು ಪಡಿ ದಿನಾಂಕವು 01-12-2009 ರ ಮೇರೆಗೆ ಜರುಗಿಸಲಾಯಿತು.

-: ಸಾರ್ವಜನಿಕ ವಿಚಾರಣಾ ಮಂಡಳಿ :-

ಹಾಜರಿದ್ದ ಸಾರ್ವಜನಿಕ ವಿಚಾರ ಮಂಡಳಿ ಸದಸ್ಯರು

| | |
|---|---|
| ಶ್ರೀ ಎನ್. **ಜಯರಾಮ**, ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ. | ಅಧ್ಯಕ್ಷರು. |
| ಶ್ರೀ ಎಮ್. ಎ. **ಮನಿಯಾರ**, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ – 2 (ಚಿಕ್ಕೋಡಿ ಕೇಂದ್ರ). | ಸದಸ್ಯರು |

| ಮೆ: ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಸಂಸ್ಥೆಯ ಪ್ರತಿನಿಧಿಗಳು (ಯೋಜನೆಯ ಪ್ರತಿಪಾದಕರು) | | |
|---|---|---|
| 1 | ಶ್ರೀ. ಪಿ. ಸಿ. ಸವದಿ. | ಅಧ್ಯಕ್ಷರು |
| 2 | ಶ್ರೀ. ಜೆ. ಎ. ಪಾಟೀಲ | ಉಪ ಅಧ್ಯಕ್ಷರು |
| 3 | ಶ್ರೀ. ಜಿ. ಎಮ್. ಪಾಟೀಲ. | ವ್ಯವಸ್ಥಾಪಕ ನೀರ್ದೆಶಕರು |
| 4 | ಶ್ರೀ. ಆರ್. ಎ. ಪತ್ತಾರ. | ನೀರ್ದೆಶಕರು |
| 5 | ಶ್ರೀ. ಎನ್. ಡಿ. ಯಕ್ಸಂಬಿ. | ನೀರ್ದೆಶಕರು |
| 6 | ಶ್ರೀ. ಆರ್. ವಿ. ಕುಲಕರ್ಣಿ | ನೀರ್ದೆಶಕರು |
| 7 | ಶ್ರೀ. ಎನ್. ಎಮ್. ತೆಲಸಂಗ | ನೀರ್ದೆಶಕರು |
| 8. | ಶ್ರೀ. ಎ. ಕೆ. ಬಾಶಾ. | ಮುಖ್ಯ ಅಭಿಯಂತರರು |
| 9. | ಶ್ರೀ. ಎಲ್. ವಿ. ಕುಂಬಾರ | ಸಾಮಾನ್ಯ ವ್ಯವಸ್ಥಾಪಕರು |
| 10. | ಶ್ರೀ. ಎಸ್. ಎ. ಠಕ್ಕನ್ನವರ | ಓ. ಎಸ್. |
| 11. | ಶ್ರೀ. ಎಸ್. ಡಿ. ನಂದೇಶ್ವರ | ನೀರ್ದೆಶಕರು |
| 12. | ಶ್ರೀ. ಜಿ. ಎಮ್. ತೆವರಮನಿ | ನೀರ್ದೆಶಕರು |
| 13. | ಶ್ರೀ. ವಿ. ಪಿ. ಮನಗಲಿ | ಖರೀದಿ ಅಧಿಕಾರಿ |
| 14. | ಶ್ರೀ. ಎ. ಎನ್. ಗಾನಗೇರ | ಕಾರ್ಮಿಕ ಕಲ್ಯಾಣ ಅಧಿಕಾರಿ |

ಕೇಂದ್ರ ಪರಿಸರ ಹಾಗೂ ಅರಣ್ಯ ಮಂತ್ರಾಲಯದ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆಯ ದಿನಾಂಕ:14-09-2006 (ತಿದ್ದುಪಡಿ ಅಧಿಸೂಚನೆ ದಿನಾಂಕ : 01-12-2009) ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ನೀಡುವ ಮುಂಚೆ ಸಾರ್ವಜನಿಕ ಆಲಿಕೆಯನ್ನು ನಿರ್ಧರಿಸಿದ ಯೋಜನೆಯ ಸ್ಥಳದಲ್ಲಿ ಜರುಗಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದನ್ನು ಮಾನ್ಯ ಜಿಲ್ಲಾಧಿಕಾರಿಗಳು ಅಥವಾ ಇತರೆ ಹೆಚ್ಚುವರಿ ಜಿಲ್ಲಾಧಿಕಾರಿಗಳವರ ಹುದ್ದೆಗಿಂತ ಕೆಳಗಿರದಂತಹ ಅಧಿಕಾರಿಗಳ ಸಭಾಧ್ಯಕ್ಷತೆಯಲ್ಲಿ ಜರುಗತಕ್ಕದು.

ರಾಜ್ಯ ಮಟ್ಟದ ಅಪ್ರೈಸಲ್ ತಜ್ಞರ ಸಮಿತಿ, ಕರ್ನಾಟಕ, ಇವರ Terms of reference ಪತ್ರದ ದಿನಾಂಕ: 04-06-2016ರಂತೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ, ಇವರ ಪತ್ರದ ದಿನಾಂಕ: 09-09-2016ರಂದು ಸಮ್ಮತಿಸಿರುವ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವತಿಯಿಂದ ದಿನಾಂಕ:- 28/10/2016

ರಂದು ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರ ಸಭಾಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ಪರಿಸರ ಕುರಿತು ಸಾರ್ವಜನಿಕಾ ವಿಚಾರಣಾ ಸಭೆಯನ್ನು ಜರುಗಿಸಲಾಯಿತು.

ಪರಿಸರ ಆಘಾತ ಆಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡಿ ದಿನಾಂಕ:01-12-2009) ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ 30 ದಿನಗಳ ಮುಂಚಿತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿ ಪ್ರಕಟಣೆಯನ್ನು ರಾಜ್ಯದಲ್ಲಿ ಪ್ರಚಲಿತವಿರುವ **"ವಿಜಯವಾಣಿ"** ಕನ್ನಡ ದಿನಪತ್ರಿಕೆಯಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಚಲಿತವಿರುವ **"The Deccan Herald"** ಆಂಗ್ಲ ದಿನಪತ್ರಿಕೆಯಲ್ಲಿ ದಿನಾಂಕ:- 27/09/2016ರಂದು ಹಾಗೂ ಜಿಲ್ಲೆಯಲ್ಲಿ ಪ್ರಚಲಿತವಿರುವ ಸ್ಥಳಿಯ ಕನ್ನಡ ದಿನಪತ್ರಿಕೆಯಾದ **"ವಿಜಯವಾಣಿ"**ದಲ್ಲಿ ದಿನಾಂಕ:- 29/09/2016 ರಂದು ಪ್ರಕಟಣೆಯನ್ನು ನೀಡಲಾಗಿದೆ.

ಯೋಜನಾ ಸ್ಥಳದಲ್ಲಿರುವ ಹಾಗೂ ಸದರಿ ಯೋಜನೆಯಿಂದ ಪರಿಣಾಮಕ್ಕೆ ಒಳಗಾಗಬಹುದಾದ ರಹವಾಸಿಗಳು ಪರಿಸರ ಗುಂಪುಗಳು, ಹಾಗೂ ಇತರರ ಸಲಹೆ ಅಭಿಪ್ರಾಯ ಹಾಗೂ ಆಕ್ಷೆಪಣೆಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಅಧ್ಯಕ್ಷರು ಸಾರ್ವಜನಿಕ ವಿಚಾರಣಾ ಸಮಿತಿ ಇವರಿಗೆ ಅಧಿಸೂಚನೆ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳ ಒಳಗಾಗಿ ಮಂಡಿಸಲು ಅವಕಾಶವನ್ನು ನೀಡಲಾಗಿತ್ತು.

ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಪ್ರತಿಯನ್ನು ಹಾಗೂ ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಸಾರಾಂಶವನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸಾರ್ವಜನಿಕರ ಪರಾವಿರ್ಷನೆಗೆ ಹಾಗೂ ಮಾಹಿತಿಗಾಗಿ ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ.
- ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಜಿಲ್ಲಾ ಪಂಚಾಯತ ಬೆಳಗಾವಿ ಇವರ ಕಾರ್ಯಾಲಯ.
- ಜಿಲ್ಲಾ ಕೈಗಾರಿಕಾ ಕೇಂದ್ರ ಬೆಳಗಾವಿ.
- ಪುರಸಭೆ ಕಾರ್ಯಾಲಯ, ಅಥಣಿ, ಬೆಳಗಾವಿ ಜಿಲ್ಲೆ.
- ಗ್ರಾಮ ಪಂಚಾಯತ ಕಾರ್ಯಾಲಯ, ಸಂಕೋನಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
- ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಧಾರವಾಡ.
- ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಳಗಾವಿ-02 (ಚಿಕ್ಕೋಡಿ ಕೇಂದ್ರ).
- ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ,ದಕ್ಷಿಣ ವಲಯ ಕಛೇರಿ ನಂ ಇ-3/240,ಕೇಂದ್ರೀಯ ಸದನ,4ನೇ ಮಹಡಿ,ಇ ಮತ್ತು ಎಫ್ ವಿಂಗ್ಸ ಮುಖ್ಯ ರಸ್ತೆ,17 ನೇ ಮುಖ್ಯ ರಸ್ತೆ,2ನೇ ಬ್ಲಾಕ ಕೋರಮಂಗಳ,ಬೆಂಗಳೂರು.
- ಸಹಾಯ ಕೇಂದ್ರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ನೆಲ ಅಂತಸ್ತು,ನಂ.49,ಪರಿಸರ ಭವನ ಚರ್ಚ್‌ಸ್ಟ್ರಿಟ,ಬೆಂಗಳೂರು.

ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು, ಬೆಳಗಾವಿ, ಇವರು ಸಾರ್ವಜನಿಕ ಆಲಿಕೆ ಪಟ್ಟಿ, ಜಾಹೀರಾತುಗಳಲ್ಲಿ ನೀಡಿದ ಎಲ್ಲ ಅಧಿಸೂಚನೆಗಳನ್ನು ಕೂಲಕುಂಷವಾಗಿ ಪರಿಶೀಲಿಸಿ ಇವುಗಳಿಂದ ಸಮರ್ಪಕ ಪ್ರಕಟಣೆಯಾಗಿದೆಯೋ ಹೇಗೆ ಎಂಬುದನ್ನು ಅವಲೋಕಿಸಿದರು ಹಾಗೂ ಇದು ಕಾನೂನಿನ ಅಧಿನಿಯಮಾನುಸಾರವಾಗಿದೆಯೋ ಹೇಗೆ ಎಂಬುದನ್ನು ಪರಿಶೀಲಿಸಿದರು.

ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ-02(ಚಿಕ್ಕೋಡಿ ಕೇಂದ್ರ) ಇವರಲ್ಲಿ ದಿನಾಂಕ:-27-10-2016 ರವರೆಗೆ ಒಂದು ಈ-ಮೇಲ್ ಮೂಲಕ ಅರ್ಜಿಯು ಸ್ವೀಕೃತವಾಗಿರುತ್ತದೆ. ಅವುಗಳ ವಿವರ ಈ ಕೆಳಗಿನಂತಿವೆ.

1. ಶ್ರೀ. **ಸುನಂದಾ ರೆಡ್ಡಿ,** ಪರಿಸರವಾದಿಗಳು ನಾಲಗೌಡಾ ಜಿಲ್ಲೆ ತೆಲಾಂಗನ ರಾಜ್ಯ ಇವರಿಂದ ದಿನಾಂಕ: 22/10/2016, ಇದರ ಪ್ರತಿಯನ್ನು **ಅನುಬಂಧ-1**ರ ಮೂಲಕ ಲಗತ್ತಿಸಲಾಗಿದೆ.

ದಿನಾಂಕ:- 28/10/2016 ರಂದು ಜರುಗಿಸಿದ ಸಾರ್ವಜನಿಕ ವಿಚರಣಾ ಸಭೆಗೆ ಆಗಮಿಸಿದ ಜಿಲ್ಲಾಧಿಕಾರಿಗಳು ಬೆಳಗಾವಿ, ಸಾರ್ವಜನಿಕರು, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ, ಚುನಾಯಿತ ಪ್ರತಿನಿಧಿಗಳು ಹಾಗೂ ಸಂಸ್ಥೆಯ ಪದಾದಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಶ್ರೀ. **ಏಮ್.** ಏ. **ಮನಿಯಾರ, ಪರಿಸರ ಅಧಿಕಾರಿಗಳು** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಾರ್ಯಾಲಯ ಬೆಳಗಾವಿ - 2 (ಚಿಕ್ಕೋಡಿ ಕೇಂದ್ರ). ಬೆಳಗಾವಿ ಇವರು ಆತ್ಮಿಯವಾಗಿ ಸ್ವಾಗತಿಸಿದರು ಸದರಿಯವರು ಪರಿಸರ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರ ಹಾಗೂ ಈಐಎ ಅಧಿಸೂಚನೆ ಪ್ರಕಾರ ಸಾರ್ವಜನಿಕ ವಿಚಾರಣೆಯ ಅವಶ್ಯಕತೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಈ ಬಗ್ಗೆ 30 ದಿನಗಳ ಮುಂಚಿತವಾಗಿ ಪ್ರಕಟಣೆಯನ್ನು ನೀಡಲಾಗಿತ್ತು ಎಂದು ಹಾಗೂ ಸಾರ್ವಜನಿಕ ವಿಚಾರಣೆಯ ನಿಯಮಾವಳಿ ಬಗ್ಗೆ ವಿವರಗಳನ್ನು ನೀಡಿದರು. ಸದರಿಯವರು ಜಿಲ್ಲಾದಿಕಾರಿಗಳಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಕೋರಿದರು ಹಾಗೂ ಸಾರ್ವಜನಿಕರಿಗೆ ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಮಂಡಿಸಲು ಕೋರಿದರು. ಸಭೆಯ ನಡುವಳಿಗಳನ್ನು ವಿಡಿಯೋ ಗ್ರಾಪ ಮಾಡಲಾಗುವುದು ಎಂದು ವಿವರಿಸಿದರು.

ಮೇ!! **M/S Nichrome Testing Laboratory and Research Pvt Ltd., Dharwad.,** ಸಂಸ್ಥೆಯ **ಪರಿಸರ ತಜ್ಞರಾದ** ಶ್ರೀ. ಗುರು ರಾಮಚಂದ್ರ ಮುನವಳ್ಳಿ., ಇವರು ಕನ್ನಡದಲ್ಲಿ ನಿಯೋಜಿತ ಯೋಜನೆಯ ಉದ್ದೇಶಗಳ ಬಗ್ಗೆ Power Point Presentation ಮೂಲಕ ವಿವರಗಳನ್ನು ನೀಡಿದರು. ಸದರಿಯವರು ಯೋಜನಾ ಪ್ರಸಕ್ತ ಪ್ರದೇಶದಲ್ಲಿರುವ ಪ್ರಸ್ತುತ ಪರಿಸರ ದೃಶ್ಯ, ಸದರಿ ಯೋಜನೆಯಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮ, ಪರಿಸರ ವ್ಯವಸ್ಥಾಪನೆ ಯೋಜನೆ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ರೂಪಿಸಿದ ಕ್ರಮಗಳು ಇತ್ಯಾದಿಗಳ ಬಗ್ಗೆ ವಿವರಗಳನ್ನು ಮಂಡಿಸಿದರು. **ಇವುಗಳ ಹಾರ್ಡಕಾಪಿಯನ್ನು ಅನುಬಂಧ - 2 ರ ಮೂಲಕ ಲಗತ್ತಿಸಲಾಗಿದೆ.**

ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸುತ್ತಮುತ್ತಲಿನ ಗ್ರಾಮಸ್ಥರು, ಸರ್ಕಾರ ಸಂಘ ಸಂಸ್ಥೆಗಳು, ವಿದ್ಯಾರ್ಥಿಗಳು, ಪತ್ರ-ಕರ್ತರು, ಹಾಗೂ ಆಸಕ್ತಿ ಹೊಂದಿದ ಇತರರು ಸದರಿ ಸಭೆಯಲ್ಲಿ ಭಾಗ ವಹಿಸಿದ್ದರು. **ಸಭೆಯಲ್ಲಿ ಭಾಗವಹಿಸಿದವರ ಯಾದಿಯನ್ನು** ಅನುಬಂಧ-3 **ಹಂತ ಲಗತ್ತಿಸಲಾಗಿದೆ.** ಜಿಲಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದವರು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿಯೂ ನೀಡಬಹುದೆಂದು ಸೂಚಿಸಿದರು.

58

ಸಾರ್ವಜನಿಕ ವಿಚಾರಣೆಯ ಕಾಲಕ್ಕೆ 04 ಜನರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು ಮತ್ತು ಕಾರ್ಖಾನೆಯವರು ಅದಕ್ಕೆ ತಕ್ಕಂತೆ ಸ್ಪಷ್ಟನೆ ನೀಡಿದ್ದು. ಅದರ ವಿವಿರಗಳು ಈ ಕೆಳಗಿನಂತಿವೆ.

1. ಶ್ರೀ. ಅನಂತ. ಬ. ಬಸರಿಕೋಡಿ. ಸಾ॥ ಸತ್ತಿ ತೋಟ.

- ಸದರಿ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿದ ಮತ್ತು ಶುದ್ಧೀಕರಿಸಿದ ಎಷ್ಟು ಪ್ರಮಾಣದ ಈ ನೀರನ್ನು ರೈತರಿಗೆ ಕಬ್ಬು ವ್ಯವಸಾಯ ಮಾಡಲು ಸರಬರಾಜು ಮಾಡುತ್ತಿರೆಂದು ಪ್ರಶ್ನಿಸಿದರು.

**ಸ್ಪಷ್ಟನೆ:**

➢ ಪ್ರತಿ ದಿನ 500 ಕ್ಯೂಬಿಕ ಲೀಟರ್ ತ್ಯಾಜ್ಯ ನೀರನ್ನು ಸಂಸ್ಕರಿಸಿ ಮತ್ತು ಶುದ್ಧೀಕರಿಸಿಲಾಗುವುದು. ಅದರಲ್ಲಿ 100 ಕ್ಯೂಬಿಕ ಲೀಟರ್ ನೀರನ್ನು ಕಾರ್ಖಾನೆಯಲ್ಲಿ ಮರು ಬಳಸಿಕೊಂಡು ಉಳಿದ 400 ಕ್ಯೂಬಿಕ ಲೀಟರ್ ನೀರನ್ನು ರೈತರಿಗೆ ವಿತರಿಸಬಹುದೆಂದು ತಿಳಿಸಿದರು.

2. ಶ್ರೀ. ದರೆಪ್ಪ ನಾಯಕ. ಸಾ॥ ಸಂಕೋನಟ್ಟಿ.

- ಉದ್ದೇಶಿತ ಕಾರ್ಖಾನೆಯ ವಿಸ್ತರಣೆಯಿಂದ ಎಷ್ಟು ಜನರಿಗೆ ಉದ್ಯೋಗ ಅವಕಾಶಗಳು ಸಿಗುವ ಬಗ್ಗೆ ವಿವರಣೆ ನೀಡಬೇಕೆಂದು ಆಗ್ರಹಿಸಿದರು.

**ಸ್ಪಷ್ಟನೆ:**

➢ ಸದರಿ ಸಕ್ಕರೆ ಕಾರ್ಖಾನೆಯ ಸಾಮರ್ಥ್ಯವನ್ನು ಹೆಚ್ಚಿಸುವದರಿಂದ ಸುಮಾರು ನೇರವಾಗಿ 80 ಕ್ಕಿಂತಲೂ ಹೆಚ್ಚಿನ ಉದ್ಯೋಗವಕಾಶ ನೀಡಲು ಸಾಧ್ಯವಿದೆಯಂದು ತಿಳಿಸಿದರು.

**3. ಶ್ರೀ. ಎ.ಬಿ.ಠಕ್ಕಣ್ಣವರ. ಸಾ॥ ನದಿಇಂಗಳಗಾವ**

- ಸದರಿ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯವನ್ನು 4000 ಟಿ.ಸಿ.ಡಿ.ಯಿಂದ 5500 ಟಿ.ಸಿ.ಡಿಗೆ ಹೆಚ್ಚಿಸುವದರಿಂದ ಹಾಗೂ ಸಹ ವಿದ್ಯುತ್ ಉತ್ಪಾದನೆಯನ್ನು 12 ಮೆ.ವ್ಯಾ./ಪ್ರತಿ ಗಂಟೆಯಿಂದ 27 ಮೆ.ವ್ಯಾ/ಪ್ರತಿ ಗಂಟೆಗೆ ಹೆಚ್ಚಿಸುವದರಿಂದ ರೈತರಿಗೆ ಆಗುವ ಲಾಭಗಳ ಬಗ್ಗೆ ವಿವರಣೆಗಳನ್ನು ನೀಡಲು ವಿನಂತಿಸಿಕೊಂಡರು.

**ಸ್ಪಷ್ಟನೆ:**

➢ ಕಬ್ಬು ನುರಿಸುವ ಸಾಮರ್ಥ್ಯ ಮತ್ತು ವಿದ್ಯುತ್‌ಚ್ಛಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ರೈತರು ತಮ್ಮ ಕಬ್ಬನ್ನು ಕಡಿಮೆ ಸಮಯದಲ್ಲಿ ಸರಬರಾಜು ಮಾಡುವುದರಿಂದ ಸಕ್ಕರೆಯ ಚೇತರಿಕೆಯ ಪ್ರಮಾಣದ ಏರಿಕೆಯಿಂದ ಕಬ್ಬಿಗೆ ಹೆಚ್ಚಿನ ಬೆಲೆ ನೀಡಲು ಸಾಧ್ಯವಾಗುವುದೆಂದು ತಿಳಿಸಿದರು.

➢ ಹೆಚ್ಚು ಕಬ್ಬು ನುರಿಸುವುದರಿಂದ ಸಹ ವಿದ್ಯುತ್ ಘಟಕದ ಉತ್ಪಾದನೆ ಹೆಚ್ಚಾಗುವುದರಿಂದ ಕಾರ್ಖಾನೆಯವರಿಗೆ ಹೆಚ್ಚಿನ ಲಾಭ ದೊರಕುವುದು. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲ ಮಾಡಲು ಸಹಾಯವಾಗುತ್ತದೆ.

4. ಶ್ರೀ ಆನಂದ ಕುಲಕರ್ಣಿ, ಸಾ॥ ಕವಟಕೊಪ್ಪ

- ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಸಾಂದ್ರತೆ ಹೆಚ್ಚಾಗಿರುವುದರಿಂದ ಜಾಗತಿಕ ತಾಪಮಾನದಲ್ಲಿ ಏರಿಕೆ ಕಂಡುಬಂದಿರುವುದು ಹಾಗೂ ಹವಾಮಾನದ ವೈಪರಿತ್ಯದಿಂದ ಮುಂದಿನ ದಿನಗಳಲ್ಲಿ ಆಗುವ ಪ್ರತಿಕೂಲ ಪರಿಣಾಮಗಳನ್ನು ಕಡಿಮೆ ಮಾಡಲು ಕೈಗೊಳ್ಳಬೇಕಾದ ಮಾರ್ಗೋಪಾಯಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ.
- ಪ್ರಸ್ತುತ ಸನ್ನಿವೇಶದಲ್ಲಿ ಕಾರ್ಖಾನೆಯ ಚಿಮಣಿಯಿಂದ ಹೊರಹೊಮ್ಮುವ ಅನಿಲ ಹಾಗೂ ಧೂಳಿನ ಕಣಗಳು ಜಾಗತಿಕ ತಾಪಮಾನದಲ್ಲಿ ಯಾವ ರೀತಿಯ ಪರಿಣಾಮಗಳು ಬೀರುವ ಬಗ್ಗೆ ವಿವರಣೆಗಳನ್ನು ನೀಡಲು ವಿನಂತಿಸಿದರು.
- ಬೇಸಿಗೆಯಲ್ಲಿ ನದಿಯ ನೀರು ಬತ್ತಿದಾಗ ಕಾರ್ಖಾನೆಯವರು ಯಾವ ರೀತಿಯ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಂಡಿರುವ ಬಗ್ಗೆ ವಿವರಣೆಯನ್ನು ನೀಡಲು ಸೂಚಿಸಿದರು.

**ಸ್ಪಷ್ಟಣೆ:**

➢ ಕಾರ್ಖಾನೆಯ ಚಿಲುಮೆಯಿಂದ ಹೊರಹೊಮ್ಮುವ ಹೊಗೆಯಲ್ಲಿ ಪ್ರಮುಖವಾಗಿ ಧೂಳಿನ ಕಣ ಮತ್ತು ಗಂಧಕದ ಡೈ ಆಕ್ಸೈಡ್ ಪ್ರಮಾಣವು ಹೆಚ್ಚಾಗಿರುತ್ತದೆ. ಅದರಲ್ಲಿ ಇಂಗಾಲದ ಡೈ ಆಕ್ಸೈಡ್ ಪ್ರಮಾಣವು ಕಡಿಮೆ ಇರುತ್ತದೆ. ಆದ್ದರಿಂದ ಜಾಗತಿಕ ತಾಪಮಾನದಲ್ಲಿ ಹೆಚ್ಚಿನ ಪರಿಣಾಮ ಆಗುವುದಿಲ್ಲ ಎಂದು ತಿಳಿಸಿದರು.

➢ ಅಲ್ಲದೇ ವಿಷಕಾರಿ ಅನಿಲಗಳನ್ನು ಹಾಗೂ ಧೂಳಿನ ಕಣಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿರ್ದಿಷ್ಟ ಪಡಿಸಿದ ಮಾನಕಗಳೊಳಗೆ ಇರುವಂತೆ ಮಾಡಲು ವಾಯು ಮಾಲಿನ್ಯ ನಿಯಂತ್ರಣ ಉಪಕರಣ ಆದ Electrostatic precipitator ಅಳವಡಿಸಲಾಗುವುದು.

➢ ಕಬ್ಬಿನಲ್ಲಿ ಸುಮಾರು ಶೇ 70 ರಷ್ಟು ನೀರು ಇರುವದರಿಂದ ಬೇಕಾದ ಪ್ರಮಾಣವನ್ನು ಕಬ್ಬಿನಿಂದಲೇ ಪಡೆದು, ಇದಕ್ಕಿಂತ ಹೆಚ್ಚಿಗೆ ಬೇಕಾಗುವ ನೀರಿನ ಕೊರತೆಯನ್ನು ಸದರಿ ಕಾರ್ಖಾನೆಯ ಅವರಣದಲ್ಲಿರುವ ಕೊಳವೆ ಬಾವಿಗಳಿಂದ ಪಡೆಯಲಾಗುವುದು ಹಾಗೂ ಸದರಿ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಿಲಾಗುವುದು ಮತ್ತು ಶುದ್ಧೀಕರಿಸಿದ ನೀರನ್ನು ಪುನರ ಬಳಕೆ ಮಾಡಲಾಗುವುದು.

- **ಮಾನ್ಯ ಜಿಲ್ಲಾಧಿಕಾರಿಗಳು ಸದರಿ ಕಾರ್ಖಾನೆಯ ಕಬ್ಬು ಬೆಳೆಯುವ ವ್ಯಾಪ್ತಿ ಪ್ರದೇಶ, ಅಂದಾಜು ಕಬ್ಬಿನ ಲಭ್ಯತೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಕಾರಣಗಳ ಬಗ್ಗೆ ಸ್ಪಷ್ಟಿಕರಣಗಳನ್ನು ನೀಡಲು ಸೂಚಿಸಿದರು.**

**ಸ್ಪಷ್ಟನೆ:**

➢ ಸದರಿ ಕಾರ್ಖಾನೆಯ ಕಬ್ಬು ಸರಬರಾಜಿನ ವ್ಯಾಪ್ತಿ 14 ಹಳ್ಳಿಗಳಿಗೆ ಸೀಮಿತವಾಗಿರುತ್ತದೆ.

87

- ಅಂದಾಜು 18 ಲಕ್ಷ ಟನ್ ಕಬ್ಬು ಲಭ್ಯವಿರುತ್ತದೆ. ಅದರಲ್ಲಿ ಸದರಿ ಕಾರ್ಖಾನೆಯ ಸಾಮರ್ಥ್ಯವು 4000 ಟಿ.ಸಿ.ಡಿ.ಯಿಂದ 5500 ಟಿ.ಸಿ.ಡಿ.ಗೆ ಹೆಚ್ಚಿಸಿದರು ಸಹ ಇನ್ನೂ ಅಧಿಕ ಪ್ರಮಾಣದ ಕಬ್ಬು ಲಭ್ಯವಾಗಿರುತ್ತದೆ. .

- ಅಧಿಕ ಪ್ರಮಾಣದ ಕಬ್ಬು ನೆರೆ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಹೋಗುವುದರಿಂದ ಸದರಿ ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಉದ್ದೇಶಿಸಿರುತ್ತೇವೆಂದು ಸಭೆಗೆ ತಿಳಿಸಿದರು.

**ಶ್ರೀ ಎನ್ ಜಯರಾಂ ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಬೆಳಗಾವಿ ಹಾಗೂ ಅಧ್ಯಕ್ಷರು, ಸಭೆಯಲ್ಲಿ ಸಾರ್ವಜನಿಕರು ಕೇಳಿದ ಪ್ರಶ್ನೆಗಳು ಮತ್ತು ಈ ಪ್ರಶ್ನೆಗಳಿಗೆ ಪರಿಸರ ತಜ್ಞರು ನೀಡಿದ ಉತ್ತರಗಳು ಮತ್ತು ಘಟಕದ ಸ್ಥಾಪನೆಯ ಅವಶ್ಯಕತೆ ಮತ್ತು ಘಟಕದ ಸ್ಥಾಪನೆಯಿಂದ ಆಗಬಹುದಾದ ಪರಿಣಾಮಗಳು ಮತ್ತು ಅವುಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಹಾಗೂ ಘಟಕದ ಮಾಲಿಕರು ನೀಡಿದ ಭರವಸೆಗಳನ್ನುಅವಲೋಕಿಸಿ ಈ ಕೆಳಗಿನಂತೆ ಸಲಹೆ ಸೂಚನೆಗಳನ್ನು ನೀಡಿದರು.**

- ಕಾರ್ಖಾನೆಯ ಆವರಣದಲ್ಲಿ ಪ್ರತಿ ವರ್ಷ 10000 ರೂ ದಂತೆ 5 ವರ್ಷ ಸಸಿಗಳನ್ನು ನೆಡಬೇಕೆಂದು ಹಸಿರು ಪಟ್ಟಿಯನ್ನು ನಿರ್ಮಿಸ ಬೇಕು ಅದಕ್ಕಾಗಿ ಸ್ಥಳೀಯ ಗ್ರಾಮ ಪಂಚಾಯತ ಹಾಗೂ ಅರಣ್ಯ ಇಲಾಖೆಯ ಸಹಕಾರವನ್ನು ಪಡೆಯಬಹುದು.
- ಸ್ಥಳೀಯ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಅವುಗಳ ಪರಿಹಾರಕ್ಕೆ ತೀವ್ರ ಕ್ರಮ ಕೈಗೋಳುವುದು.
- ವಾಯ್ಯು ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ಧೂಳು ನಿಯಂತ್ರಣಕ್ಕಾಗಿ ಸೂಕ್ತ ಉಪಕರಣಗಳನ್ನು ಅಳವಡಿಸಿ ಸುತ್ತ ಮುತ್ತಲಿನ ಗ್ರಾಮಸ್ಥರ ಹಾಗೂ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಚ್ಚರಿಕೆ ವಹಿಸುವುದು.
- ಮಳೆ ನೀರು ಬಳಕೆಗಾಗಿ ಮಳೆ ನೀರು ಕೋಯ್ಲಿ ಪದ್ದತಿಯನ್ನು ಅಳವಡಿಸಿಕೊಳ್ಳಬೇಕು.
- ಕಾರ್ಖಾನೆಯಲ್ಲಿ ವಿನಾಯಿತಿ ಮೇರೆಗೆ ಸ್ಥಳೀಯ ಗ್ರಾಮಸ್ಥರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಲು ಕ್ರಮ ಕೈಗೋಳವುದು.
- ಕಾರ್ಖಾನೆಯ ಸುತ್ತಮುತ್ತಲಿನ ಗ್ರಾಮಸ್ಥರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳವುದು. ಸುತ್ತಮುತ್ತಲಿನ ಗ್ರಾಮಗಳ ಪ್ರಾಥಮಿಕ ಶಿಕ್ಷಣ, ಆರೋಗ್ಯ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು ಸೇವೆಗಳಿಗೆ ಆದ್ಯತೆ ನೀಡಬೇಕು.
- ಕಾರ್ಖಾನೆಯಿಂದ ಹೋರ ಬರುವ ನೀರನ್ನು ಹಾಗೂ ನಿಯಂತ್ರಣಕ್ಕಾಗಿ ಮುನ್ನ ಎಚ್ಚರಿಕೆ ಕ್ರಮ ಕೈಗೊಳ್ಳವುದು. ಕಲುಷಿತ ನೀರು ಭೂಮಿಯಲ್ಲಿ ಇಂಗಿ ಆ ಪ್ರದೇಶದಲ್ಲಿರುವ ಕೊಳವೆ ಬಾವಿ ಹಾಗೂ ತೇರೆದ ಬಾವಿಗಳ ನೀರಿನ ಮೇಲೆ ಪ್ರತಿಕೂಲ ಪರಿಣಾಮ ಆಗದಂತೆ ನೋಡಿಕೊಳ್ಳುವುದು.

ಸಭೆಯಲ್ಲಿ ಕೇಳಲಾದ ಪ್ರಶ್ನೆಗಳು, ಆಕ್ಷೆಪಣೆಗಳು ಹಾಗೂ ಅವುಗಳಿಗೆ ನೀಡಿದ ಉತ್ತರ ಇವೆಲ್ಲವುಗಳನ್ನು ವಿಡಿಯೋ ರೇಕಾರ್ಡಿಂಗ ಮಾಡಲಾಗಿದ್ದು. ಅದನ್ನು ಸರ್ಕಾರದ ಪರಿಸರ ಹಾಗೂ ಅರಣ್ಯ ಸಚಿವಲಾಯಕ್ಕೆ ಕಳಿಸಲಾಗುವುದೆಂದು ತಿಳಿಸಿದರು ಕಾರಣ ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಗ್ರಾಮಸ್ಥರ

ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮ ವಾಗದಂತೆ ಎಲ್ಲಾ ಅವಶ್ಯಕ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧ್ಯಕ್ಷರು ಸಭೆಯ ಆಯೋಜಕರಿಗೆ ಕಟ್ಟು ನಿಟ್ಟಿನ ನಿರ್ದೇಶನ ನೀಡಿದರು.ನಂತರ ಸಾರ್ವಜನಿಕ ಅಭಿಪ್ರಾಯವನ್ನು ಆಲಿಸಿ ಸಭೆಗೆ ಉಪಸ್ಥಿತ ಇದ್ದ ಎಲ್ಲಾ ಸಾರ್ವಜನಿಕರು ನಿಯೋಜಿತ ಘಟಕದ ಸ್ಥಾಪನೆಯ ಪರವಾಗಿ ತಮ್ಮ ಅಭಿಪ್ರಾಯವನ್ನು ದಾಖಲಿಸಿಲಾಯಿತು.

ಅಂತಿಮವಾಗಿ ಶೀ ಎಮ್ ಏ ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2(ಚಿಕ್ಕೋಡಿ ಕೇಂದ್ರ), ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ, ನಿಯೋಜಿತ ಘಟಕದ ಸಂಚಾಲಕರಿಗೆ, ಸಿಬ್ಬಂಧಿಗಳಿಗೆ, ಸಾರ್ವಜನಿಕ ಮಾಧ್ಯಮದವರಿಗೆ ಮತ್ತು ಪೋಲಿಸ್ ಸಿಬ್ಬಂಧಿಯವರಿಗೆ ತಮ್ಮ ಮಂಡಳಿ ಪರವಾಗಿ ವಂದನೆಗಳನ್ನು ಸಲ್ಲಿಸಿದರು.

(ಏನ್. ಜಯರಾಮ, ಭಾ. ಆ. ಸೇ)
ಜಿಲ್ಲಾಧಿಕಾರಿಗಳು ಬೆಳಗಾವಿ ಮತ್ತು
ಅಧ್ಯಕ್ಷರು ಸಾರ್ವಜನಿಕ ವಿಚಾರಣಾ
ಸಮೀತಿ ಬೆಳಗಾವಿ, ಕರ್ನಾಟಕ.